## ಗೀತಗಾಯನಕ್ಕೇಕೆ ಬಜಾನಾ

ಇತ್ತೀಚೆಗೆ ಸ್ಟಾರ್ ಸುವರ್ಣ ಆರಂಭಿಸಿದ ಗೀತಗಾಯನಕ್ಕೆ 'ಗಾನಾಬಜಾನಾ' ಎಂಬ ಹಿಂದಿ ಹೆಸರು ಏಕೆ? ಅವರ ಸ್ವಂತಿಕೆ ಮೆರೆಯಲೂ ಒಂದು ಕನ್ನಡ ಪದ ಸಿಗಲಿಲ್ಲವೇ? ಇಲ್ಲೂ ಕನ್ನಡವನ್ನು ಕಡೆಗಣಿಸಬೇಕೇ?

—ಶ್ರೀನಾಥ್ ಕೋನೇಟಿ

## ಮೌಢ್ಯವಿಜ್ಞಾನ

ಝೀ ಕನ್ನಡದ 'ಯಾರೇ ನೀ ಮೋಹಿನಿ'ಯಲ್ಲಿ ಮಾಯ, ಮಂತ್ರ ಮತ್ತು ಮೂಢನಂಬಿಕೆಗಳ ವೈಭವೀಕರಣ ಮಿತಿಮೀರಿದೆ. ಈ ಶತಮಾನದಲ್ಲಿ ಅದು ಎಷ್ಟು ಪ್ರಸ್ತುತ ಆಗಬಲ್ಲದು ಎಂಬ ವಿವೇಚನೆ ಇರಬೇಕು. ವಿವೇಚನಾರಹಿತ ಇಂತಹ ಧಾರಾವಾಹಿಗಳನ್ನು ಪ್ರಸಾರ ಮಾಡಲು ಟೀವಿಯವರು ಹೇಗೆ ಒಪ್ಪಿಗೆ ಕೊಡುವರು ಎನ್ನುವುದೇ ಪ್ರಶ್ನೆ.

—ಎಸ್. ರವೀಂದ್ರನಾಥ ಬೆಂಗಳೂರು

## ಶಿಸ್ತಿಲ್ಲದ ಬಿಗ್‌ಬಾಸ್

ಕಲರ್ಸ್ ಕನ್ನಡದ 'ಬಿಗ್ ಬಾಸ್' ಜಗ್ಗಾಟದಿಂದ ಕೂಡಿದೆ. ಈ ವಾರದ ಕಳ್ಳ ಪೊಲೀಸ್‌ರಲ್ಲಿ ಯಾರು ಕಳ್ಳರು, ಯಾರು ಪೊಲೀಸ್ ಗೊತ್ತೇ ಆಗುವುದಿಲ್ಲ. ಕಳ್ಳನನ್ನು ಜೈಲಿಗೆ ಕಳಿಸುತ್ತಾರೆ. ಅವರನ್ನು ಮೊದಲು ಅಮಾನತ್ತಿನಲ್ಲಿ ಇಟ್ಟು ನಂತರ ವಿಚಾರಣೆ ನಡಸಬೇಕಲ್ಲವೇ? ಎಲ್ಲರೂ ಅಲ್ಲಿ ನಟರೇ ಆಗಿದ್ದು ಇಂತಹ ಸಣ್ಣ ವಿಷಯವೂ ಗಮನಕ್ಕೆ ಬಾರದೆ ಇದ್ದದ್ದು ವಿಪರ್ಯಾಸ. ಕದಿಯುವ ಟಾಸ್ಕ್ ಎಂದರೆ ಅವರೇ ತಿನ್ನುವ ಪದಾರ್ಥ ಕದಿಯುತ್ತಾರೆ. ಒಟ್ಟಿನಲ್ಲಿ ಶಿಸ್ತಿಲ್ಲದ, ಬೇಡದ ಮಾತು, ವೇಷಭೂಷಣ, ನಡವಳಿಕೆಗೆ ಸೀಮಿತವಾಗಿದೆ.

—ಅಂಚೆ ಸುಬ್ರಹ್ಮಣ್ಯ, ಕೊಪ್ಪ

## ವೈರುಧ್ಯದ ದಾಂಪತ್ಯ

ಜಾನಕಿ ಧಾರಾವಾಹಿಯ ವೈಶಿಷ್ಟ್ಯ ಎಂದರೆ ಇಜ್ಜೋಡು ವಿಷಮ ವಿಷಾದ ದಾಂಪತ್ಯಗಳು ಒಂದಲ್ಲ ಎರಡಲ್ಲ ಅನೇಕ. ಸಿಐಎಸ್‌ಪಿ ಪತ್ನಿ ವಿಚ್ಛೇದನ ಪಡೆದು ಮತ್ತೊಂದು ಮದುವೆ ಮಾಡಿಕೊಂಡಿದ್ದಾರೆ. ಜಾನಕಿ ನಿರಂಜನನನ್ನು ಮದುವೆಯಾದರೂ ಮುಟ್ಟಲೂ ಬಿಟ್ಟಿಲ್ಲ. ಶ್ಯಾಮಲ ಗಂಡನೊಡನೆ ಕೊಂಕು ಮಾತು ಬಾಲಿಶ ಅನ್ನಿಸುತ್ತದೆ. ಗೌತಮ ಮತ್ತು ವರುಣ್‌ವೈಭವ್ (ಗೌತಮ) ಒಂದೂವರೆ ವರ್ಷ ಸಂಸಾರ ಮಾಡಿ ಹೆಂಡತಿ ಮಗುವನ್ನು ಬಿಟ್ಟು ಇನ್ನೊಬ್ಬಳನ್ನು ಮದುವೆಯಾಗಿದ್ದಾನೆ. ಚಿರಂತನ್ ಒಬ್ಬಳನ್ನು ಪ್ರೀತಿಸಿ ಕೈಕೊಟ್ಟು ಇನ್ನೊಬ್ಬಳ ಜೊತೆ ಮದುವೆ ಆಗುತ್ತಿದ್ದಾನೆ. ಈಗ ಸಿಐಎಸ್‌ಪಿ ಮಗ ಮತ್ತು ಶ್ಯಾಮಲಾ ಮಗಳು ಮದುವೆ ಏನಾದರೂ ಆದರೆ ಅವರ ದಾಂಪತ್ಯದಲ್ಲಾದರೂ ಸಾಮರಸ್ಯ ನೋಡಬಹುದಾ? ಸೀತಾರಾಂ ಅವರ ಹಿಂದಿನ ಧಾರಾವಾಹಿಗಳ ಸೊಗಡು ಇದಕ್ಕೆ ಬರಲಿ ಎಂಬ ಆಶಯದ ನಿರೀಕ್ಷೆಯಲ್ಲಿ.

—ಸತ್ಯಬೋಧ ಬೆಂಗಳೂರು

ವಾರದ ಪತ್ರ

## 'ಅಲೋಪತಿ ಕಿತಾಪತಿ' ಸರಿಯಲ್ಲ

ಚಂದನ ವಾಹಿನಿಯ 'ಶುಭೋದಯ ಕರ್ನಾಟಕ'ದ ಎರಡನೆಯ ವಾರ್ಷಿಕೋತ್ಸವದ ಸಂಚಿಕೆ ತುಂಬ ಲವಲವಿಕೆಯಿಂದ ಕೂಡಿತ್ತು. ಆದರೆ 'ಶುಭೋದಯ ಕರ್ನಾಟಕ'ದ ಸಾರ್ಥಕತೆ, ಮಹತ್ವ, ಪರಿಣಾಮ ಕುರಿತಂತೆ ಚರ್ಚೆ ಆಗಲೇ ಇಲ್ಲವಲ್ಲ! ಪ್ರಾರಂಭದಲ್ಲೇ ಸಂಸ್ಕೃತಭಾಷೆಯ ಪ್ರಾರ್ಥನೆ ಹಾಡಲಾಯ್ತು! ಯಾಕೆ, ಕನ್ನಡದಲ್ಲೇ 'ಪ್ರಾರ್ಥನೆ' ಸಲ್ಲಿಸಬಹುದಿತ್ತಲ್ಲ? ನ.18ರ ಸಂಚಿಕೆಯಲ್ಲಿ ಎಚ್.ಆರ್. ಲೀಲಾ ಅವರ ಸಂದರ್ಶನದಲ್ಲಿ ಮಾತಾಡುವ ಭರದಲ್ಲವರು 'ಅಲೋಪತಿ ಕಿತಾಪತಿ' ಎಂದರು. ಆಯುರ್ವೇದ ವೈದ್ಯ ಪದ್ಧತಿಯ ಬಗ್ಗೆ ಅವರ ತಿಳಿವಳಿಕೆ ಸರಿ. ಆದರೆ ಹಾಗಂತ 'ಅಲೋಪತಿ ಕಿತಾಪತಿ' ಅಂತ ಹೀಗಳಿಕೆ ಯಾಕೆ? ಅಲೋಪತಿ ಕೂಡ ಸಂಶೋಧನಾಧಾರಿತ ವೈದ್ಯಕೀಯ ಚಿಕಿತ್ಸಾ ಪದ್ಧತಿಯಲ್ಲವೇ? ಅಂಥ ಸಂಶೋಧಿತ ಪದ್ಧತಿಯನ್ನು ಅವಮಾನಿಸುವುದೇಕೆ?

—ಹುರುಕಡ್ಲಿ ಶಿವಕುಮಾರ, ಹಗರಿಬೊಮ್ಮನಹಳ್ಳಿ

## ಕಿರಿಕಿರಿಯ ಕಾಮಿಡಿ ಶೋ

ಝೀ ಕನ್ನಡದಲ್ಲಿ ಪ್ರತಿ ಶನಿವಾರ ಮತ್ತು ಭಾನುವಾರ ರಾತ್ರಿ 7.30 ರಿಂದ 9 ಗಂಟೆವರೆಗೆ ಪ್ರಸಾರವಾಗುತ್ತಿರುವ ಮಾಸ್ಟರ್ ಆನಂದ್‌ರವರ ನಿರೂಪಣೆಯ 'ಕಾಮಿಡಿ ಕಿಲಾಡಿ'ಗಳು ಎಂಬ ಶೀರ್ಷಿಕೆಯ ಹಾಸ್ಯ ಕಾರ್ಯಕ್ರಮ ಮತ್ತು ಪ್ರತಿದಿನ ರಾತ್ರಿ 8 ರಿಂದ 9 ಸೂಪರ್ ಕಲರ್ಸ್ ಚಾನಲ್‌ನಲ್ಲಿ ಅನುಪಮಾ ನಿರೂಪಿಸುವ 'ಮಜಾ ಭಾರತ'ಎಂಬ ಶೀರ್ಷಿಕೆಯ ಹಾಸ್ಯ ಕಾರ್ಯಕ್ರಮ ನಿಜಕ್ಕೂ ನಮಗೆ ವೀಕ್ಷಿಸಲು ಬಹಳ ಕಿರಿಕಿರಿ ಆಗುತ್ತಿದೆ. ಕಾರಣವೇನಂದರೆ ಇರದಲ್ಲಿನ ಎಲ್ಲಾ ಕಲಾವಿದರ ಅತಿರೇಕದ ಅಭಿನಯ ದ್ವಂದ್ವಾರ್ಥ ಸಂಭಾಷಣೆ ಹಳಸಲು ಹಳೆಯ ಹಾಸ್ಯ ದೃಶ್ಯಗಳು ಮತ್ತು ಮುಖ್ಯವಾಗಿ ಇವರು ಕೂಗುವುದು, ಹೊಡೆಯುವುದು, ಬೈಯ್ಯುವುದು ಬಹಳ ಅತಿ ಆಗಿದೆ. ನಿಜವಾಗಿಯೂ ನಮ್ಮ ಅನಿಸಿಕೆ ಪ್ರಕಾರ ಈ ಕೆಟ್ಟ ರೀತಿಯಲ್ಲಿ ನಮ್ಮ ಕನ್ನಡ ಚಿತ್ರರಂಗದ ಹಾಸ್ಯ ಚಕ್ರವರ್ತಿಗಳಾದ ನರಸಿಂಹರಾಜು, ಬಾಲಕೃಷ್ಣ, ಮುಸುರಿ ಕೃಷ್ಣಮೂರ್ತಿ, ದ್ವಾರಕೀಶ್ ಅವರಂತ ಮಹಾನ್ ಹಾಸ್ಯನಟರ ಅಭಿನಯ ಮಾಡಿದ್ದರೆ ಇಷ್ಟು ದಶಕಗಳ ಕಾಲ ನೆನಪಿನಲ್ಲಿ ಇರುತ್ತಿರಲಿಲ್ಲ. ಮುಂದಾದರು ನಮ್ಮ ಈ ಹಾಸ್ಯ ಕಾರ್ಯಕ್ರಮ ಯುವ ಕಲಾವಿದರು ಈ ಮಹಾನ್ ಚೇತನಗಳ ಅಭಿನಯವನ್ನು ನೋಡಿ ಕಲಿಯಲಿ ಎಂದು ನಮ್ಮ ಮನವಿ.

—ಬಾಬಣ್ಣನವರ್, ಬೀರೂರು

## ವೂಟ್ ಫಲಿತಾಂಶ ನೀಡಿ

ಕನ್ನಡದ ಕೋಟ್ಯಧಿಪತಿ ಜ್ಞಾನವನ್ನು ಹೆಚ್ಚಿಸುವ ಕಾರ್ಯಕ್ರಮ ಸುಮಾರು 45 ಕಂತುಗಳಲ್ಲಿ ಸುಂದರವಾಗಿ ಮೂಡಿ ಶ್ರೀಸಾಮಾನ್ಯರ ಜೊತೆ ನಡೆಸಿ ಅವರ ಕಷ್ಟಸುಖಗಳಿಗೆ ಸ್ಪಂದಿಸಿ ಹಣದ ಸಹಾಯವನ್ನು ಮಾಡಿ ಉತ್ತಮವಾಗಿ ಗ್ರ್ಯಾಂಡ್ ಫಿನಾಲೆ ಕಾರ್ಯಕ್ರಮ ನಡೆಯಿತು. ಸ್ಪರ್ಧಿಗಳ ಜೊತೆ ಪುನೀತ್‌ರವರ ಸರಳ ಮಾತುಗಾರಿಕೆ ಮೆಚ್ಚುವಂತಿತ್ತು. ವೀಕ್ಷಕರಿಗೂ Vootನಲ್ಲಿ ಆಡುವ ಅವಕಾಶ ಸಿಕ್ಕಿದ್ದು ಸಂತೋಷದ ವಿಷಯ. ನಾವೂ Vootನಲ್ಲಿ ಆಡಿ ನಮ್ಮ ಜ್ಞಾನವನ್ನು ನಾವೇ ಪರೀಕ್ಷಿಸಿಕೊಂಡೆವು. ಆದರೆ ಪ್ರತಿ ಎಪಿಸೋಡಿನಲ್ಲೂ ಪುನೀತ್‌ರವರ ಬಾಯಲ್ಲೇ Vootನಲ್ಲಿ ಆಡಿ ಬಹುಮಾನ ಗೆದ್ದುಕೊಳ್ಳಿ ಎನ್ನುವ ಆಮಿಷ ತೋರಿಸಿ ಅದರ ಫಲಿತಾಂಶ ಏನೂ ಹೇಳದೆ ಇದ್ದುದು ಸರಿ ಎನಿಸಲಿಲ್ಲ.

—ವೀಣಾಶಂಕರ್, ಬೆಂಗಳೂರು

## ಸೂಪರ್ ದಂಪತಿ

'ಕಲರ್ಸ್‌ನ 'ಸೂಪರ್ ದಂಪತಿ'. ಈ ಹಿಂದೆ ಉದಯ ಟಿ.ವಿ.ಯಲ್ಲಿ 'ಆದರ್ಶ ದಂಪತಿಗಳು' ಎಂಬ ಕಾರ್ಯಕ್ರಮ ಪ್ರಸಾರವಾಗುತ್ತಿತ್ತು. (ಅದು ವಾರದಲ್ಲಿ ಒಮ್ಮೆ ಪ್ರಸಾರವಾಗುತ್ತಿತ್ತು. ಶೈಲಜಾ ಸಂತೋಷ್, ಪ್ರಸಿದ್ಧ ನಟ ಶ್ರೀನಾಥ್ ನಡೆಸಿಕೊಡುತ್ತಿದ್ದರು. ಆ ಕಾರ್ಯಕ್ರಮದ ರೀತಿ ನೀತಿ ಬಹಳ ಸೊಗಸಾಗಿತ್ತು). ಆದರೆ ಸೂಪರ್ ದಂಪತಿ ಕಾರ್ಯಕ್ರಮದಲ್ಲಿ ಒಂದು ದಿನದ ಸಂಗೀತಗಾರರ ವಿಶೇಷದಲ್ಲಿ ಭಾಗವಹಿಸಿದ್ದ ದಂಪತಿಗಳ ಸೊಗಸಾದ ನಾದಬಹ್ಮನ ಪರಿಚಯ ಬಹಳ ಸೊಗಸಾಗಿತ್ತು. ಮಿಕ್ಕಂತೆ 'ಸೂಪರ್ ದಂಪತಿ' ಕಾರ್ಯಕ್ರಮದಲ್ಲಿ ವೀಕ್ಷಕರಿಗೆ 'ಸೂಪರ್ ಸಂಗತಿ' ಏನೂ ಎಂದು ತಿಳಿಯುತ್ತಿಲ್ಲ. ನಿರೂಪಕರ ನಿರೂಪಣೆಯಲ್ಲಿ ಬರುವ (ಹೆಸರು—ಎಸರು, ಹೆಂಡ್ತಿ—ಎಂಡ್ತಿ, ಹೆಚ್ಚು—ಎಚ್ಚು ಇತ್ಯಾದಿ) ಅಪಭ್ರಂಶಗಳು ಪದೇ ಪದೇ ಕೇಳಿ ಕೇಳಿ ಕಾರ್ಯಕ್ರಮದ ಬಗ್ಗೆಯೇ ಜಿಗುಪ್ಸೆ ಮೂಡುತ್ತಿದೆ.

—ಬಿ. ಶ್ರೀಕಂಠಯ್ಯ, ಬೆಂಗಳೂರು